ಬೇಸರವನ್ನು ವ್ಯಕ್ತಪಡಿಸುತ್ತಿದ್ದೇನೆ. ವಿಷಾದ ವ್ಯಕ್ತಪಡಿಸುತ್ತಿದ್ದೇನೆ. ತಾವು ಎನೂ ಬೇಸರಪಟ್ಟುಕೊಳ್ಳಬೇಕಾಗಿಲ್ಲ. ಪೂರ್ವಗ್ರಹಪೀಡಿತನಾಗಿ ಈ ಸ್ಥಾನದಲ್ಲಿ ಕುಳಿತು ಯಾರಿಗೂ ಕಳಂಕ ಹಚ್ಚತಕ್ಕಂಥ ಪ್ರಯತ್ನವನ್ನು ಯಾವ ಕ್ಷಣದಲ್ಲಿಯೂ ನಾನು ಮಾಡುವುದಿಲ್ಲ.

ಶ್ರೀ ಬಿ. ಸೋಮಶೇಖರ್ :— ಥ್ಯಾಂಕ್ಯೂ.

4) ಅಧ್ಯಕ್ಷರ ಅಪ್ಪಣೆ ಮೇರೆಗೆ

ಬೆಂಗಳೂರು ಜಲಮಂಡಳಿ ವಿಚಾರ (ಬೈವಾಟರ್ ಕಂಪನಿ)

+ ಶ್ರೀ ಎಚ್.ಎನ್. ನಂಜೇಗೌಡ :— ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಇರುವುದರಿಂದ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇನ್ನು ಉತ್ತರ ಕೊಟ್ಟಿಲ್ಲ. ನಾವು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಚಾರದಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಈಗ ಆ ವಿಚಾರದಲ್ಲಿ ಮೇಲ್ಮನೆಯಲ್ಲಿ ನಿಮ್ಮ ಮಂತ್ರಿಗಳು ಅದನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ ನಾನು ಯಾರಿಗೂ ನೋವಾಗುವಂತೆ ನನ್ನ ರಾಜಕೀಯ ಜೀವನದಲ್ಲಿ ಪದಗಳನ್ನು ಬಳಸಿಲ್ಲ. ನಾನು ಅಪಾದನೆ ಮಾಡಿರಬಹುದು. ಮತ್ತೊಂದು ಮಾಡಿರಬಹುದು. ನಾನು ನಾನೇ ಒಂದು ಲಕ್ಷ್ಮಣ ರೇಖೆಯನ್ನು ಹಾಕಿಕೊಂಡಿದ್ದೇನೆ. ನಾನು ಲಕ್ಷ್ಮಣರೇಖೆಯನ್ನು ಹಾಕಿಕೊಂಡಿದ್ದೇನೆ. ನಾನು ಲಕ್ಷ್ಮಣರೇಖೆಯನ್ನು ಮೀರಿ ಇವರ ಬಗ್ಗೆ ಸ್ವಲ್ಪ ಲಘು ಪದಗಳನ್ನು ಬಳಸಿದೆ. ನಿಮ್ಮ ಬಗ್ಗೆ. ಅದು ಇರಲಿ. ನನಗೆ ಹಾಗೆ ಅನಿಸಿತು. ನಾನು ಏಕೆ ಹೇಳಿದೆ ಅಂದರೆ ನೋಡಿ ಇದರಲ್ಲಿ ನನಗೆ ಅನೇಕ ವಿಚಾರಗಳು ಗೊತ್ತಿತ್ತು. ಈಗ ಉದಾಹರಣೆಗೆ ನೀವು ಖಾತೆಗಳನ್ನು ಹಂಚಿಕೆ ಮಾಡುತ್ತೀರಿ. ಅನಂತ್‌ನಾಗ್ ಅವರಿಗೂ ಏನೋ ಮಾಡಿದ್ದೀರಿ. ಈಗ ಒಂದು ಕ್ಯಾಬಿನೇಟ್ ನೋಟ್ ನಿಮ್ಮ ಕ್ಯಾಬಿನೆಟ್‌ಗೆ ಬರುತ್ತದೆ. ಡಿಸ್‌ಕಷ್ ಇನ್-ಕನ್‌ಕ್ಲೂಸೀವ್ ಆಗುತ್ತದೆ. The Cabinet was seized of the matter. ಆ ಪೇಪರನ್ನು ತರಿಸಿಕೊಂಡು ರಿವೈಜ್ಡ್ ಕ್ಯಾಬಿನೇಟ್ ನೋಟನ್ನು ನಿಮ್ಮ ಮಿನಿಸ್ಟರ್ ಮಾಡುತ್ತಾರೆ. ನಾನು ಈ ಟೆಕ್ನಿಕಾಲಿಟೀಸ್‌ನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆ ಮಾಡುವುದಕ್ಕೆ ಹೋಗಲಿಲ್ಲ ಅಂದರೆ ಇನ್ನೂ ಅನೇಕ ಇವೆ. ಪ್ರೊಸಿಜರ್ ಇರ್ರಾಗ್ಯುಲಾರಿಟೀಸ್, ಇನ್ನು ಅನೇಕ ಇವೆ. ಅವುಗಳನ್ನು ನಾನು ಅವತ್ತು ಯಾವುದನ್ನು ಹೇಳುವುದಕ್ಕೆ ಹೋಗಲಿಲ್ಲ. ಇವತ್ತೂ ಹೇಳುವುದಿಲ್ಲ. ನನಗೆ ಎನು ಇತ್ತು ಅಂದರೆ ನಿಮ್ಮ ಮೇಲೆ ಸಿಟ್ಟು ಬರಬೇಕಾದರೆ ನೀವು ಮಾಡಿ ಗುಡಿ ದೇವರಾಗಿಬಿಟ್ಟಿರಿ. ಸುಮ್ಮನೇ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಷ್ಟೆ. ಕುರಿಯೂದರೂ ಕುಯ್ಯಲಿ, ಕೋಳಿಯನ್ನಾದರೂ ಕುಯ್ಯಲಿ, ಕತ್ತೆಯನ್ನಾದರೂ ಕಡಿಯಲಿ, ದೇವಸ್ಥಾನದ ಮುಂದೆ. ದೇವರು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದು. ನೀವು ಈ ರೀತಿ ಕುಳಿತುಬಿಟ್ಟರಲ್ಲಾ, ಈ ಬೆಂಗಳೂರಿನ ಜನಕ್ಕೆ ಎಷ್ಟು ತೊಂದರೆಯಾಗುತ್ತದೆಯಲ್ಲಾ ಎಂದು ಹೇಳಿ ನನ್ನ

ಆಳಲು, ನೋವು ಆವತ್ತು. ಇವತ್ತು ನಿಮ್ಮ ಮಂತ್ರಿಗಳು ಮೇಲ್ಮನೆಯಲ್ಲಿ ಸಮರ್ಥನೆ ಮಾಡುತ್ತಿದ್ದಾರೆ. ಬೈವಾಟರ್‌ನವರಿಗೆ ಕೊಟ್ಟಿರುವುದು ಸರಿ. ಅವರಿಗೆ ರೇಟು ರೆಡ್ಯೂಸ್ ಮಾಡುವುದಕ್ಕೆ ಹೇಳಿದ್ದೇವೆ. ಲೆಟರ್ ಬರೆದಿದ್ದೇವೆ ಉತ್ತರ ತರಿಸಿಕೊಳ್ಳುತ್ತಿದ್ದೇವೆ, ನಮ್ಮ ಬೆಂಗಳೂರು ಇಂಜನೀಯರ್ಸ್‌ಗೆ ಬಿಡುವಿಲ್ಲ, ಅದಕ್ಕೆ ಬೇರೆಯವರಿಗೆ ಕೊಟ್ಟಿದ್ದೇವೆ, ಹೊಸ ಹೊಸ ಕಾರಣ. ಇಲ್ಲಿ ಡೊಮ್ಯಾಸ್ಟಿಕ್, ನಾನ್ ಡೊಮ್ಯಾಸ್ಟಿಕ್ ಕನೆಕ್ಷನ್ಸ್ 8 ಲಕ್ಷ ಇವೆ ಎಂದು ಕೇಳಿದೆ. ಬಹುಶಃ ವರ್ಷಕ್ಕೆ ಒಂದು ನೂರು ಕೋಟಿ, ಒಂದು ನಾಲ್ಕು ವರ್ಷ ನೀವು ಮೊಬಲೈಜ್ ಮಾಡುವುದಕ್ಕೆ ಕಷ್ಟವಾಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) :— ನಾನು ಆ ದಿನ ಸದನದಲ್ಲಿ ಇರಲಿಲ್ಲ. ಆಮೇಲೆ ನಿನ್ನೆ ಏನೋ ತಾವು ಕ್ಯಾಬಿನೇಟ್ ನೋಟ್ ಅಧ್ಯಕ್ಷರಿಗೆ ಕೊಟ್ಟಿದ್ದು ಅಧ್ಯಕ್ಷರು ಅದನ್ನು ನನಗೆ ಕಳುಹಿಸಿದ್ದರು. ಅದಕ್ಕೆ ನಾನು ಹೇಳಿದ ಕ್ಯಾಬಿನೆಟ್ ನೋಟ್ ಕಾಪಿ ಎನ್ನುವುದು ಹೌದು. But the Government is not willing to lay it on the Table of the House. I have requested the speaker. About the subject, I have to go through it.

ಶ್ರೀ ಎಚ್.ಎನ್. ನಂಜೇಗೌಡ :— ನಾನು ಏಕೆ ಅದನ್ನು ಹೇಳುವುದಕ್ಕೆ ಹೊರಟೆ ಅಂದರೆ ತಾವು ಅದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ. ಅದಕ್ಕೆ ನಾನು ಅದನ್ನು ಪ್ರಾರಂಭದಲ್ಲಿಯೇ ಹೇಳಿದ್ದು. ತಾವು ಉತ್ತರ ಕೊಡುವುದಕ್ಕಿಂತ ಮುಂಚೆ ನಿಮ್ಮ ಮಂತ್ರಿಗಳು ಮೇಲ್ಮನೆಯಲ್ಲಿ ಅದನ್ನು ಸಮರ್ಥನೆ ಮಾಡಿಕೊಳ್ಳುವುದಾಗಲಿ, ಇದರ ವಿಚಾರದಲ್ಲಿ ವ್ಯವಹಾರ ಮಾಡುವುದಾಗಲಿ, ನಾನು ಈಗಲೂ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದಕ್ಕೆ ಒಂದು ಫುಲ್‌ಸ್ಟಾಪ್ ಹಾಕಿ, ಯೋಚನೆ ಮಾಡಿ ತಾವು, ಯೋಚನೆ ಮಾಡಿದರೆ ತಮಗೆ ಅರ್ಥವಾಗುತ್ತದೆ. ಮೇಲ್ಮನೆಯಲ್ಲಿ ಅವರು ಸಮರ್ಥನೆ ಮಾಡಿಕೊಳ್ಳುವುದು ಬೇಡ. ಇನ್ನೊಬ್ಬ ಮಂತ್ರಿ ಇನ್ನೊಂದು ತರಹ ಹೇಳುವುದು, ಈಗ ನೀವು ಇದನ್ನು ಇನ್ನೂ ಖಚಿತವಾಗಿ ಆಲೋಚನೆ ಮಾಡಿಲ್ಲ. ನಮ್ಮ ಅಹವಾಲು ಏನು ಎನ್ನುತಕ್ಕಂಥಾದ್ದನ್ನು ಅರ್ಥಮಾಡಿಕೊಂಡು ಬೇರೆಯವರಿಗೆಲ್ಲಾ ತಾವು ನಿರ್ದೇಶನ ಕೊಡಬೇಕಾಗುತ್ತದೆ. ಈ ವಿಚಾರದಲ್ಲಿ ಯಾರೂ ಮುಂದುವರಿಯಬೇಡಿ. ಇದನ್ನು ಸ್ವಲ್ಪ ಆಲೋಚನೆ ಮಾಡುತ್ತೇವೆಂದಾದರೂ ತಾವು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅವರು ಮುಂದುವರಿಯುವುದು, ಅಗ್ರಿಮೆಂಟ್‌ಗೆ ಸಹಿ ಹಾಕುವುದು ಮುಂತಾಗಿ ಆಗಿ ಫಜೀತಿಯಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ :— ತಾವುಗಳೂ ಕೂಡ ಸರಕಾರವನ್ನು ನಡೆಸಿದವರು. ಸಚಿವ ಸಂಪುಟದ ಒಬ್ಬ ಮಂತ್ರಿ ಇದನ್ನು ಸಮರ್ಥನೆ ಮಾಡಿಕೊಳ್ಳುವುದು ತಪ್ಪಾಗುತ್ತದೆಯೇ? ನಾನು ಏಕಸ್ವಾತ್ಯಾಗಿ ಬಿಡುಬ್ಲ್ಯೂಎಸ್‌ಎಸ್‌ನ ಲೆವೆಲ್‌ನಲ್ಲಿಯೇ ಇದೇನಾದರೂ ಆಗಿದ್ದರೆ ತಾವು ಹೇಳಿದ್ದನ್ನು ಒಪ್ಪಬಹುದಾಗಿತ್ತು. But it is the decision of the Cabinet.

SRI H.N. NANJE GOWDA :— Decision of the Cabinet ಅಂದರೆ ಅದೇ ಫೈನಲ್ ಆಗುತ್ತದೋ? ಅದನ್ನು ನೀವು ರಿವೈಸ್ ಮಾಡುವುದಿಲ್ಲವೇ?

7H39-50

SRI J.H. PATEL :— Decision of the Cabinet also ಏನು ಡಿಸೈಡ್ ಮಾಡಿದ್ದಾರೆ, ಏನೇನು ಮಾತನಾಡಿದ್ದಾರೆ, ಏನು ಮಾತನಾಡಬೇಕಾಗಿದೆ, ಅದು ಇನ್ನೂ ಫೈನಲೈಸ್ ಆಗಿಲ್ಲ. ಕಾಂಟ್ರಾಕ್ಟ್ಸ ಆಗಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಈ ಕುರಿತು ಹೇಳಿದ್ದೇ ಹೇಳಿದ್ದು.... ಬೆಂಗಳೂರಿನ ಜನ ಏನು ನಿರೀಕ್ಷೆ ಮಾಡುತ್ತಿದ್ದಾರೆ.... ಎಂದೆಲ್ಲಾ ಹೇಳಿದರು. ಆದರೆ ಅಲ್ಲಿ ರೇಟ್ ಇನ್ನೂ ಫಿಕ್ಸ್ ಆಗಿಲ್ಲ, ನೆಗೋಶಿಯೇಟ್ ಮಾಡುತ್ತಾ ಇದ್ದಾರೆ, ಇದೆಲ್ಲಾ ಆದ ಮೇಲೆ ತೆಗೆದುಕೊಂಡು ಬನ್ನಿ, ಎಂದು Cabinet decison is to give permission to BWSSB to negotiate with this Company about the details, evaluation, water rate. ಆದೆಲ್ಲಾ ತರದ ಮೇಲೆ ಫೈನಲ್ ಡಿಸಿಷನ್ ಆಗಬೇಕು. ಅವರು ಈಗಾಗಲೇ ಎಲ್ಲವೂ ಆಗಿದೆ ಎಂಬ ರೀತಿಯಲ್ಲಿ 26 ರೂ.ಗಳಷ್ಟು ಆಗಿದೆ, ಬೆಂಗಳೂರಿನ ಜನರಿಗೆ ಅನ್ಯಾಯವಾಗಿದೆ ಎಂದು ಮಾನ್ಯ ಸುರೇಶ್ ಕುಮಾರ್ ರವರು ಬಹಳಷ್ಟು ಅತ್ತುಬಿಟ್ಟರು. ಈ ಪ್ರಾಜೆಕ್ಟ ಇನ್ನೂ ಹತ್ತು ವರ್ಷಗಳ ನಂತರ ಆಗುತ್ತದೆ. ಈಗ ಅದನ್ನು ಮಾಡಿದರೆ ಪ್ರಾಜೆಕ್ಟ್ ಆಗುವುದು ಇನ್ನು ಹತ್ತು ವರ್ಷಗಳ ನಂತರ. ಈಗಲೂ ಮಾಡದಿದ್ದರೆ?

ಶ್ರೀ ಎಸ್. ಸುರೇಶ್ ಕುಮಾರ್ :— ನಾನು ತಮ್ಮ ಹೇಳಿಕೆಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಆರು ತಿಂಗಳುಗಳ ಹಿಂದೆ ಕೊಟ್ಟ ಟೆಂಡರ್‌ನ್ನು ನಿಮ್ಮ ಬೋರ್ಡ್‌ನವರು ಅಪ್ರೂವ್ ಮಾಡುವುದಿಲ್ಲ. ಆದರೆ ಇನ್ನು ಹತ್ತು ವರ್ಷಗಳ ಮುಂದಿನದು ಈಗ ಯೋಚನೆ ಮಾಡುತ್ತಾರೆ...

MR. SPEAKER :— Now the matter closes there

(5) ವಿತ್ತೀಯ ಕಾರ್ಯಕಲಾಪ

ಅಯವ್ಯಯ ಭಾಷಣದ ಮೇಲಿನ ಸಾಮಾನ್ಯ ಚರ್ಚೆ (ಮುಂದು.)

+ಶ್ರೀ ಜೆ.ಎ. ಫರ್ನಾಂಡೀಸ್ (ನಾಮ ನಿರ್ದೇಶನ) :— ಸನ್ಮಾನ್ಯ ಅಧ್ಯಕ್ಷರೇ, ನನಗೆ ದಯಮಾಡಿ ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. Speaker Sir, I thank you for the privilege you have given me this afternoon and I stand before you a proud Member of this Legislature on the one hand and the fact that Bangalore has now become the capital of the sporting fraternity of the Country, is a matter of pride for us. In the recent Games, in Manipur, one of my constituents, Nisha Millet, secured 14 Gold